CCE-III-RR/PR/NSR/NSPR(B)/222/9201

**B**

**ಆಗಸ್ಟ್ 2024 ರ ಪರೀಕ್ಷೆ-3**

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]
Total No. of Questions : 45 ]

**CCE RR/PR/ NSR/NSPR**
**Full Syllabus**

**ಸಂಕೇತ ಸಂಖ್ಯೆ : 01-K**
**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

ದಿನಾಂಕ : 02. 08. 2024 ] [ Date : 02. 08. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

**Question Paper Serial No.**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**02. 08. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. ಅನುನಾಸಿಕ ಸಂಧಿಗೆ ಉದಾಹರಣೆಯಿದು

   (ಎ) ದೇವೇಂದ್ರ

   (ಬಿ) ಮಳೆಗಾಲ

   (ಸಿ) ವಾಙ್ಮಯ

   (ಡಿ) ದಿಗಂತ

2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

   (ಎ) ಅರ್ಧವಿರಾಮ ಚಿಹ್ನೆ

   (ಬಿ) ಉದ್ಧರಣ ಚಿಹ್ನೆ

   (ಸಿ) ವಾಕ್ಯವೇಷ್ಠನ ಚಿಹ್ನೆ

   (ಡಿ) ಭಾವಸೂಚಕ ಚಿಹ್ನೆ

3. 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ ಸಮಾಸ

(ಬಿ) ಕ್ರಿಯಾ ಸಮಾಸ

(ಸಿ) ದ್ವಿಗು ಸಮಾಸ

(ಡಿ) ಅಂಶಿ ಸಮಾಸ

4. 'ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ

(ಎ) ಸಾಮಾನ್ಯಾರ್ಥಕಾವ್ಯಯ

(ಬಿ) ಅನುಕರಣಾವ್ಯಯ

(ಸಿ) ಕ್ರಿಯಾರ್ಥಕಾವ್ಯಯ

(ಡಿ) ಭಾವಸೂಚಕಾವ್ಯಯ

5. 'ಸಾವಿತ್ರಿಯೊಳ್' ಈ ಪದದಲ್ಲಿರುವ ವಿಭಕ್ತಿ

(ಎ) ದ್ವಿತೀಯಾ

(ಬಿ) ತೃತೀಯಾ

(ಸಿ) ಪಂಚಮೀ

(ಡಿ) ಸಪ್ತಮೀ

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ

(ಎ) ಸಾಮಾನ್ಯ ವಾಕ್ಯ

(ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ

(ಡಿ) ಪ್ರಶ್ನಾರ್ಥಕ ವಾಕ್ಯ

II. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ಹುಳಹುಪ್ಪಡಿ : ಜೋಡುನುಡಿ :: ತುತ್ತತುದಿ : ............... .

8. ನದಿ : ರೂಢನಾಮ :: ವಿಜ್ಞಾನಿ : ......................... .

9. ವೈಶಾಖ : ಬೇಸಗೆ :: ಕುಠಾರ : ......................... .

10. ಮಾಡಲಿ : ವಿಧ್ಯರ್ಥಕ :: ಮಾಡಿಯಾನು : ................... .

III. **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 × 1 = 7**

11. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು ?

12. ಶಿವಚರಿತ್ರೆಯಲ್ಲಿ ಶಿವಾಜಿ ಮಹಾರಾಜರನ್ನು ಯಾರ ಅವತಾರವೆಂದು ಹೇಳಲಾಗಿದೆ ?

13. ಆಚಾರವು ಯಾವುದಕ್ಕೆ ಸಂಬಂಧಿಸಿದೆ ?

14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

15. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?

16. ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು ?

17. ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

19. ರಾಜರ ಪ್ರಕೃತಿ ಹೇಗಿರುತ್ತದೆ ?

20. ಸಿರಿಯು ರಾಜರಿಗೆ ಒಲಿದರೆ ಆಗುವ ಅನಾಹುತಗಳಾವುವು ?

21. ಮೊಗ್ಗನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು ?

22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕೆಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?

23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳಾವುವು ?

24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವನ್ನು ತಿಳಿಸಿ.

25. ಭಗತ್‌ಸಿಂಗ್ ವೀರಯೋಧನಾಗಿ ಅಮರನಾದುದು ಹೇಗೆ ?

26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

27. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಇಂದು ಮರುಗಲು ಕಾರಣವೇನು ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 × 3 = 6**

28. ಪು.ತಿ. ನರಸಿಂಹಾಚಾರ್

29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 × 3 = 3**

30. ಆ ರವಮಂ ನಿರ್ಜಿತಕಂ

ಠೀರವರವಮಂ ನಿರಸ್ತ ಘನರವಮಂ ಕೋ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 × 3 = 3**

31. "ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ."

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1 × 3 = 3**

32. ತಾಳಿದವನು ಬಾಳಿಯಾನು.

**ಅಥವಾ**

ಹಾಸಿಗೆ ಇದ್ದಷ್ಟು ಕಾಲು ಚಾಚು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಹೊತ್ತು! ಹೊತ್ತು! ಹೊತ್ತೇ ಹಣ."

34. "ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯಾವಶ್ಯಕ."

35. "ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇೞ್ದರುಂ ಕೇಳ್ದರುಮಿಲ್ಲಮ್."

36. "ಪ್ರೀತಿಯ ಹಣತೆಯ ಹಚ್ಚೋಣ."

37. "ರೆಕ್ಕೆಯ ಬೀಸುತ ಚೇತನಗೊಳಿಸಿ"

38. "ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

**X. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಹಸುರಾಗಸ; ..................................................

.................................................................

.................................................................

.......................................................... ಬಿಸಿಲೂ!

**ಅಥವಾ**

ಹೊಸ ಹೂವಿನ ...................................................

...........................................................................

...........................................................................

..................................................... ಯುಸಿರೂ!

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4**

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾದ ಬಗೆಯನ್ನು ತಿಳಿಸಿ.

**ಅಥವಾ**

ವಿಶ್ವೇಶ್ವರಯ್ಯ ಅವರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿಕಾರಿ ಬದಲಾವಣೆಗಳನ್ನು ಕುರಿತು ಬರೆಯಿರಿ.

42. ಪಾಂಡವರನ್ನು ರಕ್ಷಿಸಲು ನಿರ್ಧರಿಸಿದ ಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಪಾಂಡವರು ತನ್ನ ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

43. ಶ್ರೀರಂಗಪಟ್ಟಣದಿಂದ ಮೂರು ಕಿ.ಮೀ. ದೂರದಲ್ಲಿ ರಂಗನತಿಟ್ಟು ಪಕ್ಷಿಧಾಮವಿದೆ. ಕಾವೇರಿ ನದಿ ಕವಲಾಗಿ ಅಲ್ಲಲ್ಲಿ ದ್ವೀಪಗಳು ಏರ್ಪಟ್ಟಿವೆ. ದೇವರಾಜ, ರಂಗನತಿಟ್ಟು, ಗೆಂಡೆಹೊಸಹಳ್ಳಿ ಎಂಬಿವು ಮುಖ್ಯ ನಡುಗಡ್ಡೆಗಳು. ಇವುಗಳಲ್ಲಿ ರಂಗನತಿಟ್ಟು ವಿಸ್ತಾರವಾಗಿದೆ. ಸುಪ್ರಸಿದ್ಧವಾಗಿದೆ.

ರಂಗನತಿಟ್ಟು ಪಕ್ಷಿಗಳಿಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ. ಕಾವೇರಿ ನದಿ ಈ ಪ್ರದೇಶದಲ್ಲಿ ಆಳವಾಗಿದ್ದು, ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ದಂಡೆಯುದ್ದಕ್ಕೂ ಹಸಿರು ಗಿಡಮರಗಳು, ಸುತ್ತಲೂ ಹೊಲಗದ್ದೆಗಳೂ; ಇಲ್ಲೆಲ್ಲ ಪಕ್ಷಿಗಳ ಆಹಾರವಾದ ಕೀಟ, ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. ನದಿ ಆಳವಾಗಿರುವ ಕಾರಣ ಜನಸಂಚಾರವೂ ವಿರಳವಾಗಿರುವುದರಿಂದ ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆಯಿದೆ. ಆದುದರಿಂದ ಅವು ಸಾವಿರ ಸಾವಿರ ಸಂಖ್ಯೆಯಲ್ಲಿ ಇಲ್ಲಿ ನೆರೆಯುತ್ತವೆ.

ಇಲ್ಲಿ ಹಲವು ಹತ್ತು ಬಗೆಯ ಬಣ್ಣದ, ಆಕಾರದ ಗಾತ್ರದ ಪಕ್ಷಿಗಳನ್ನು ಕಾಣಬಹುದು. ಹಿಮ ಬಿಳುಪಿನ ಬಣ್ಣದ ತೆಳ್ಳನೆಯ ಕೊರಳಿನ ಬೆಳ್ಳಕ್ಕಿಗಳು; ಬಂಗಾರ ಬಣ್ಣದ, ಮುಖಮಲ್ಲಿನಂತಹ ನಯವಾದ ನೆತ್ತಿ ಮತ್ತು ಕೊರಳುಳ್ಳ ಬೂಸಹಕ್ಕಿಗಳು; ಬಾಗಿರುವ ಕೊಕ್ಕಿನ ಕೆಂಗಲ್ ಬಾತುಗಳು; ಉದ್ದವಾದ ಕೊಕ್ಕಿನ ಕರಿತಲೆ ಹಕ್ಕಿಗಳು; ಸಣ್ಣ ದೊಡ್ಡ ಗಾತ್ರದ ಬಗೆಬಗೆಯ ಕೊಕ್ಕರೆಗಳು; ಕ್ರೌಂಚ ಪಕ್ಷಿಗಳು; ಬಕ ಪಕ್ಷಿಗಳು; ಹಾವಿನಂತಹ ಕತ್ತಿನ ಕಪ್ಪು ಬಣ್ಣದ ನೀರ ಕೋಳಿಗಳು; ಮಿಂಚುಳ್ಳಿ ಹಕ್ಕಿಗಳು; ಕಡಲ ಹಕ್ಕಿಗಳು; ಬಾತುಕೋಳಿಗಳು ಮೊದಲಾದವು ಸಾವಿರಾರು ಸಂಖ್ಯೆಯಲ್ಲಿ ದಂಡೆಯುದ್ದಕ್ಕೂ ಸೇರುತ್ತವೆ.

ರಂಗನತಿಟ್ಟು ದ್ವೀಪದ ದಂಡೆಯುದ್ದಕ್ಕೂ ದೋಣಿಯಲ್ಲಿ ಪಕ್ಷಿಗಳ ನೆಮ್ಮದಿಗೆ ಭಂಗತಾರದೆ, ನೋಡುತ್ತಾ ಸಾಗಬಹುದು ಅಥವಾ ನದಿಯ ದಂಡೆಯುದ್ದಕ್ಕೂ ಮಾಡಿರುವ ದಾರಿಯಲ್ಲಿ ನಡೆದು ಹೋಗುತ್ತಾ ದೃಶ್ಯವನ್ನು ಸವಿಯಬಹುದು. ನಿಸರ್ಗವನ್ನೂ, ಪಕ್ಷಿಗಳನ್ನೂ ಪ್ರೀತಿಸುವವರಿಗೆ, ಆರಾಧಿಸುವವರಿಗೆ ಇದು ಪಕ್ಷಿಕಾಶಿಯಾಗಿದೆ.

***ಪ್ರಶ್ನೆಗಳು:***

ಅ) ರಂಗನತಿಟ್ಟು ಪಕ್ಷಿಧಾಮಕ್ಕೆ ಯಾವ ಯಾವ ಬಗೆಯ ಹಕ್ಕಿಗಳು ಬರುತ್ತವೆ ?

ಬ) ರಂಗನತಿಟ್ಟು ಪಕ್ಷಿಗಳನ್ನು ಆಕರ್ಷಿಸಲು ಕಾರಣವೇನು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

44. ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ವಿದ್ಯಾಶಂಕರ' ಎಂದು ಭಾವಿಸಿಕೊಂಡು, ಬಡಾವಣೆಯಲ್ಲಿ 'ಹದಗೆಟ್ಟಿರುವ ಚರಂಡಿ ವ್ಯವಸ್ಥೆ'ಯನ್ನು ಸರಿಪಡಿಸುವಂತೆ ಕೋರಿ ನಗರಸಭೆಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕಲ್ಬುರ್ಗಿಯ ಸರ್ಕಾರಿ ಪ್ರೌಢಶಾಲೆಯ 'ಗಂಗಾಶ್ರೀ' ಎಂದು ಭಾವಿಸಿಕೊಂಡು, ವಾರ್ಷಿಕ ಪರೀಕ್ಷಾ ಸಿದ್ಧತೆಯನ್ನು ಕುರಿತು ಗದಗದ ಆದರ್ಶ ನಗರದಲ್ಲಿ ವಾಸವಾಗಿರುವ 'ಶ್ರೀನಿವಾಸ' ಎಂಬ ಹೆಸರಿನ ತಂದೆಯವರಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5**

45. ವಿದ್ಯಾರ್ಥಿಗಳ ಜ್ಞಾನಾರ್ಜನೆಯಲ್ಲಿ ಗ್ರಂಥಾಲಯಗಳ ಮಹತ್ವ.

**ಅಥವಾ**

ಭಾರತದ ವೈಜ್ಞಾನಿಕ ಪ್ರಗತಿಯ ದ್ಯೋತಕ ಚಂದ್ರಯಾನ-3.

DO NOT WRITE ANYTHING HERE